**Bengaluru Electricity Supply Company Limited**
**(Wholly Owned Government of Karnataka Undertaking)**
BESCOM GSTN No: 29AACCB1412G1Z5

AEE JIGANI (AET)

Office of the
Assistant Executive Engineer Ele.,
C,O&M, JIGANI Sub Division
BESCOM , JIGANI

To
ARUN POULOSE
SY NO.23/6 HULLAHALLI

Sir/Madam

Sub : Arranging power supply to an extent of **48.00 KW** in favor of ARUN POULOSE SY NO.23/6 HULLAHALLI in JIGANI OMU, JIGANI

**Ref:** 1) Your application registration **61324102260058** dated **20-FEB-2026**

2) AEE/JIGANI /AE(T) a/ **16-MAR-2026**

With reference to your application dated **20-FEB-2026** . Requesting for arranging power supply to an extent of **48.00 KW** power installations in favor of ARUN POULOSE SY NO.23/6 HULLAHALLI in JIGANI OMU,JIGANI Sub division in hereby sanctioned subject to the following Conditions.

a. You are requested to pay the following charges by DD/cash (above 10000/- only DD will be Accepted) payable at the Office of C, O&M JIGANI sub-division and furnish the payment certificate for taking further action in this matter.

| Application No | Sub Application No | Tariff | Requested Load | Account Head | Amount(Rs.) |
|---|---|---|---|---|---|
| 61324102260058 | 9011839 | LT7-TEMPORARY-LT7 | 48.00 KW | 61.9067-61.9067-TRANSFORMER TESTING FEE | 1000 |
| 61324102260058 | 9011839 | LT7-TEMPORARY-LT7 | 48.00 KW | 61.9047-5% Supervisory Charges (61.904) | 25888 |
| 61324102260058 | 9011839 | LT7-TEMPORARY-LT7 | 48.00 KW | 47.3017-PCC | 356300 |
| Total Amount in Rupees | | | | | 383188 |

b. The power supply will be arranged at 0V .

c. The Tariff applicable to your installation will be LT7, or the Tariff in force From time to time.

d. You have to enter into an agreement with the BESCOM in the prescribed form.

e. Submit the Contractor's Completion-Cum-Test Report along with diagram in Duplicate.

f. You shall install LT metering panel approved by the BESCOM with suitable Capacity MCCB and/or ELCB.

g. Energy meter should be placed outside the premises at the height of 5ft from the ground level.

h. Amount through DD should be paid in the name AEE BESCOM JIGANI .

i. Intimation is valid up to 30 days from the date of issue.

In case the above requirements are not fulfilled within one month from the date of this communication, the sanction of power and registration will stand CANCELLED. The registration fee paid will be FOREFEITED.You are requested to contact the Asst. Ex. Engineer Ele., JIGANI Sub division, BESCOM for information and further needful.

Your's Faithfully,

Assistant Engineer (Technical),
JIGANI, BESCOM

Your's Faithfully,

Assistant Executive Engineer Ele.,
JIGANI, BESCOM

Scanned with CamScanner

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ ಮತ್ತು ಪಾಲನೆ ವಿಭಾಗ, ಚಂದಾಪುರ,
ಬೆ.ವಿ.ಕಂ, ಬೆಂಗಳೂರು-560081
ದೂರವಾಣಿ: 9448279027

ಬೆವಿಕಂ BESCOM

BANGALORE ELECTRICITY SUPPLY COMPANY
(A Government of Karnataka Undertaking)
O&M Division, CHANDAPURA
BESCOM, Bangalore-560081
E-Mail: eechndpr.work@gmail.com

P-94 / 198

ಕ್ರಮಾಂಕ: ಕಾ.ನಿ.ಇಂ(ವಿ)/ಸ.ಕಾ.ನಿ.ಇಂ(ತ)/ಸ.ಇಂ(ತಾಂ)/2025-26/ 13813-14    ದಿನಾಂಕ : 5 MAR 2026

ರವರಿಗೆ,

ಶ್ರೀ. ಅರುಣ್ ಪೌಲೋಸ್,
ಸ.ನಂ. 23, ಹುಲ್ಲಹಳ್ಳಿ ಗ್ರಾಮ,
ಆನೇಕಲ್ ತಾಲ್ಲೂಕು.

**ಸ್ವಯಂ ಕಾರ್ಯನಿರ್ವಹಣೆ ಯೋಜನೆ- ತಾತ್ಕಾಲಿಕ ವಿದ್ಯುತ್ ಮಂಜೂರಾತಿ**

ಮಾನ್ಯರೆ,

**ವಿಷಯ:** ಆನೇಕಲ್ ತಾಲ್ಲೂಕು ಜಿಗಣಿ ಉಪ-ವಿಭಾಗ ಜಿಗಣಿ ಲಿಂಕ್ ರಸ್ತೆ ಶಾಖೆ ಹುಲ್ಲಹಳ್ಳಿ ಗ್ರಾಮದ ಸ.ನಂ. 23 ಇಲ್ಲಿ ಹಾಲಿ ಇರುವ ತಾತ್ಕಾಲಿಕ ಎಲ್.ಟಿ ಸ್ಥಾವರದ ಆರ್.ಆರ್ ಸಂಖ್ಯೆ J3HUHTP-6306 ಕ್ಕೆ ಹಾಲಿ ಮಂಜೂರಾಗಿರುವ 5 ಕಿ.ವ್ಯಾ ವಿದ್ಯುತ್ ಭಾರದ ಜೊತೆಗೆ ಹೆಚ್ಚುವರಿಯಾಗಿ 43 ಕಿ.ವ್ಯಾ ಒಟ್ಟು 48 ಕಿ.ವ್ಯಾ ವಿದ್ಯುತ್ ಸಂಪರ್ಕವನ್ನು ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ ಕಲ್ಪಿಸಲು ಮಂಜೂರಾತಿಯನ್ನು ನೀಡುತ್ತಿರುವ ಬಗ್ಗೆ.

**ಉಲ್ಲೇಖ:**
1. ಅರ್ಜಿ ಸಂಖ್ಯೆ :61324102260058 / 20.02.2026
2. ಸ.ಕಾ.ನಿ.ಇಂ (ವಿ), ಜಿಗಣಿ ಉಪವಿಭಾಗ, ರವರ ಪತ್ರ ಸಂಖ್ಯೆ: 9353 / 04.03.2026
3. GST Circular Reference no. BESCOM/BC49/GM(CT&GST)/DGM/AGM (CT&GST) /F-3/ 2024-25/CYS-48/Dt:29-11-2024.

********

ನಿಮ್ಮ ಮನವಿಯಲ್ಲಿ ನೀವು ಕೋರಿರುವಂತೆ, ಆನೇಕಲ್ ತಾಲ್ಲೂಕು ಜಿಗಣಿ ಉಪ-ವಿಭಾಗ ಜಿಗಣಿ ಲಿಂಕ್ ರಸ್ತೆ ಶಾಖೆ ಹುಲ್ಲಹಳ್ಳಿ ಗ್ರಾಮದ ಸ.ನಂ. 23 ಇಲ್ಲಿ ಹಾಲಿ ಇರುವ ತಾತ್ಕಾಲಿಕ ಎಲ್.ಟಿ ಸ್ಥಾವರದ ಆರ್.ಆರ್ ಸಂಖ್ಯೆ J3HUHTP-6306 ಕ್ಕೆ ಹಾಲಿ ಮಂಜೂರಾಗಿರುವ 5 ಕಿ.ವ್ಯಾ ವಿದ್ಯುತ್ ಭಾರದ ಜೊತೆಗೆ ಹೆಚ್ಚುವರಿಯಾಗಿ 43 ಕಿ.ವ್ಯಾ ಒಟ್ಟು 48 ಕಿ.ವ್ಯಾ ವಿದ್ಯುತ್ ಭಾರವನ್ನು ಕೆ.ಇ.ಆರ್.ಸಿ ನಿಯಮ 4 & 7. ರ ಪ್ರಕಾರ ಈ ಕೆಳಗೆ ಸೂಚಿಸಿರುವ ಷರತ್ತುಗಳ ಮೇರೆಗೆ ಮಂಜೂರು ಮಾಡಲಾಗಿದೆ ಹಾಗೂ ಮಂಜೂರಾತಿಯು ಈ ಪತ್ರ ದಿನಾಂಕದಿಂದ 90 ದಿವಸಗಳವರೆಗೆ ಚಾಲ್ತಿಯಲ್ಲಿರುತ್ತದೆ.

1. ನೀವು ಕೋರಿರುವ ಒಟ್ಟು ಪ್ರಮಾಣ ಹಾಲಿ 5 ಕಿ.ವ್ಯಾ ಹೆಚ್ಚುವರಿಯಾಗಿ 43 ಕಿ.ವ್ಯಾ ಒಟ್ಟು 48 ಕಿ.ವ್ಯಾ (ಹಾಲಿ ಕಟ್ಟಡ).
2. ಸದರಿ ಸ್ಥಾವರಕ್ಕೆ ಹಾಲಿ ಇರುವ **ಎಫ್-4 Hullhalli Gate feeder** ಫೀಡರ್, 66/11 **KV Hulimangala** ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲಾಗುವುದು.
3. ಚಾಲ್ತಿಯಲ್ಲಿರುವ ಎಲ್.ಟಿ.-7 ಜಕಾತಿಯು ನಿಮ್ಮ ಸ್ಥಾವರಕ್ಕೆ ಅನ್ವಯಿಸಲ್ಪಡುತ್ತದೆ.
4. ಈ ಕೆಳಕಂಡ ಠೇವಣಿ/ಶುಲ್ಕಗಳನ್ನು ಸ.ಕಾನಿ.ಇಂ(ವಿ), ಬೆ.ವಿ.ಕಂ, ಜಿಗಣಿ ರವರ ಹೆಸರಿನಲ್ಲಿ **DD** ಯನ್ನು ತೆಗೆದು, 90 ದಿವಸಗಳೊಳಗೆ ಜಿಗಣಿ ಉಪ-ವಿಭಾಗ ಕಚೇರಿಯಲ್ಲಿ ಪಾವತಿಸುವುದು. ಇಲ್ಲವಾದಲ್ಲಿ ನಿಯಾಮಾನುಸಾರ ತಮ್ಮ ಅರ್ಜಿಯನ್ನು ರದ್ದುಗೊಳಿಸಿ, ಅರ್ಜಿ ನೋಂದಣಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

| ಕ್ರ.ಸಂ | ವಿವರಗಳು | ಶುಲ್ಕಗಳು | ಕೇಂದ್ರ ಸರಕು ಮತ್ತು ಸೇವಾ ಶುಲ್ಕ 9% | ರಾಜ್ಯ ಸರಕು ಮತ್ತು ಸೇವಾ ಶುಲ್ಕ 9% | ಒಟ್ಟು ಶುಲ್ಕ |
|---|---|---|---|---|---|
| | | ಹಾಲಿ ಇರುವ ಎ.ಸಿ.ಸಿ ಮೊತ್ತ: 45,900/- | | | |
| 1 | **ACC** | 3,56,300/- | 0.0 | 0.0 | 3,56,300/- |
| 2 | ಮೇಲ್ವಿಚಾರಣಾ ಶುಲ್ಕ @ 5% ಅಂದಾಜು ಪಟ್ಟಿಯ ಮೊತ್ತ ರೂ 5,17,760/- (ವಿದ್ಯುತ್ ಪರಿವೀಕ್ಷಕ ಶುಲ್ಕವನ್ನು ಹೊರತುಪಡಿಸಿ) | 25,888/- | 0.0 | 0.0 | 25,888/- |
| 3 | ಪರಿವರ್ತಕ ಪರೀಕ್ಷಾ ಶುಲ್ಕ | 1000/- | - | - | 1000/- |
| | **ಒಟ್ಟು ಪಾವತಿ ಮಾಡಬೇಕಾದ ಮೊತ್ತ** | | | | 383188/- |

ಮೇಲೆ ತಿಳಿಸಲಾಗಿರುವ ಶುಲ್ಕಗಳು / ಠೇವಣಿಗಳು ತಾತ್ಕಾಲಿಕವಾಗಿದ್ದು, ಸದರಿ ಶುಲ್ಕಗಳು / ಠೇವಣಿಗಳು ಮಾನ್ಯ ಕೆ.ಇ.ಆರ್.ಸಿ ಮತ್ತು ಬೆ.ವಿ.ಕಂ ನಿಂದ ಕಾಲ-ಕಾಲಕ್ಕೆ ಹೊರಡಿಸುವ ಅಥವಾ ಹೊರಡಿಸಲಾಗಿರುವ ಆದೇಶಗಳು/ತಿದ್ದುಪಡಿಗಳ ಮೇಲೆ ಮತ್ತು ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭಗಳಲ್ಲಿ ಕಾಮಗಾರಿಗೆ ಬಳಸುವ ಸಾಮಾಗ್ರಿಗಳ ನಿಜವಾದ ಬಳಕೆಯ ಮೇಲೆ ಅವಲಂಬಿತವಾಗಿರುತ್ತದೆ. ಆದುದರಿಂದ, ನೀವು ಭವಿಷ್ಯದಲ್ಲಿ ಕಂಪನಿಯಿಂದ ತಿಳಿಸುವ ಯಾವುದೇ ಪರಿಷ್ಕೃತ ಅಥವಾ ವ್ಯತ್ಯಾಸದ ಶುಲ್ಕಗಳು/ಠೇವಣಿಗಳನ್ನು ಪಾವತಿಸಲು ಬದ್ಧರಾಗಿರತಕ್ಕದ್ದು).



Scanned with CamScanner

1. ಈ ಮೇಲ್ಕಂಡ ದರ ಪಾವತಿಸಿ, ಪಾವತಿ ದೃಢೀಕರಣ ಪತ್ರದೊಂದಿಗೆ ಸ್ವಯಂ ಕಾಮಗಾರಿಯಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ರೂ. 500/- ಛಾಪಾ ಕಾಗದದ ಮೇಲೆ (ನಿಗದಿತ ನಮೂನೆಯಲ್ಲಿ) ಮುಚ್ಚಳಿಕೆಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಕಾಮಗಾರಿಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಜಿಗಣಿ ಉಪವಿಭಾಗ, ಬೆ.ವಿ.ಕಂ ರವರ ಮೇಲ್ವಿಚಾರಣೆಯಲ್ಲಿ "ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ" ಮಂಜೂರಾದ ಅಂದಾಜು ಪಟ್ಟಿಯಂತೆ/ ನಕ್ಷೆಯಂತೆ ನಿರ್ವಹಿಸುವುದು ಹಾಗೂ ಕಾಮಗಾರಿ ನಿರ್ವಹಣೆ ಸಂದರ್ಭದಲ್ಲಿ ಕ್ಷೇತ್ರ ಪರಿಸ್ಥಿತಿಗನುಗುಣವಾಗಿ ಅಂದಾಜು ಪಟ್ಟಿಯಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಬೇಕಾದಲ್ಲಿ ನಿಗಮದ ಅಧಿಕಾರಿಗಳ ಮಾರ್ಗದರ್ಶನದಂತೆ ಸದರಿ ಬದಲಾವಣೆ/ ಮಾರ್ಪಾಡುಗಳನ್ನು ಒಪ್ಪಿ ನಿರ್ವಹಿಸಲು ತಾವು ಬದ್ಧರಾಗಿರಬೇಕು.
3. ಒಂದು ಕಂಬದ ವಿನ್ಯಾಸದಲ್ಲಿ ಅಥವಾ ಬಿಲ್ಡಿಂಗ್ ಮೇಲೆ ಪರಿವರ್ತಕವನ್ನು ಅಳವಡಿಸಲು ನಿಮ್ಮ ಆವರಣದೊಳಗೆ ನೆಲ ಮಹಡಿಯಲ್ಲಿ ಮುಖ್ಯದ್ವಾರದ ಹತ್ತಿರದಲ್ಲಿ 3 ಮೀ X 5 ಮೀ ಅಳತೆಯುಳ್ಳ ಆಕಾರಕ್ಕೆ ತೆರೆದಿರುವ ಸ್ಥಳವನ್ನು ಒದಗಿಸಬೇಕು. ಎಲ್ಲಾ ಸಾಮಾಗ್ರಿಗಳನ್ನು ಸಂಬಂಧಪಟ್ಟ ಟಿ.ಎ.ಕ್ಯೂ.ಸಿ./ಕಾ.ನಿ.ಇಂ(ವಿ)ರವರು ಪರಿಶೀಲಿಸಿದ ನಂತರ ಸ್ವಯಂ ಕಾಮಗಾರಿ ಕೆಲಸ ನಿರ್ವಹಿಸುವುದು.
4. ಕಾಮಗಾರಿಯಲ್ಲಿ ಬಳಸುವ ಸಾಮಾಗ್ರಿಗಳನ್ನು ಬೆ.ವಿ.ಕಂ ಅನುಮೋದಿತ ಸರಬರಾಜುದಾರರಿಂದಲೇ ಖರೀದಿಸುವುದು ಹಾಗೂ ಖರೀದಿಸಿದ ಸಾಮಾಗ್ರಿಗಳನ್ನು ಬಳಸುವ ಮುನ್ನ ಹಾಗೂ ನಂತರ ಬೆ.ವಿ.ಕಂ ಅಧಿಕಾರಿಗಳಿಂದ ಪರೀಕ್ಷಿಸಿ ಹಾಗೂ ದೃಢೀಕರಣ ಪಡೆಯುವುದು ಹಾಗೂ ಕಾಮಗಾರಿಗೆ ಬಳಸಿರುವ ಎಲ್ಲಾ ಸಾಮಾಗ್ರಿಗಳ ಪರಿಶೀಲನಾ ಪತ್ರವನ್ನು ಕಂಪನಿಗೆ ಸಲ್ಲಿಸುವುದು.
5. ಮುಖ್ಯ ಪ್ಯಾನೆಲ್ ಮತ್ತು ವಿತರಣಾ ಪ್ಯಾನಲ್‌ಗಳ ನಕ್ಷೆ ಮತ್ತು ವಿನ್ಯಾಸಗಳನ್ನು ಬೆ.ವಿ.ಕಂ ನ ಸಂಬಂಧಪಟ್ಟ ವಿಭಾಗದಿಂದ ಅನುಮೋದನೆ ಪಡೆಯತಕ್ಕದ್ದು ಮತ್ತು ಮಾಸ್ಟರ್ ಮಾಪಕವನ್ನು ಅಳವಡಿಸುವುದು.
6. ತಮಗೆ ಹೊಸದಾಗಿ 1*100 ಕೆ.ವಿ.ಎ ಪರಿವರ್ತಕವನ್ನು ನಿಮ್ಮ ವತಿಯಿಂದ ಅಳವಡಿಸಿದ ನಂತರ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು.
7. ಕಾಮಗಾರಿಯನ್ನು ಅನುಮೋದಿತ ನಿರ್ಧಾರಿತ ಕಾರ್ಯವಿಧಾನದಲ್ಲಿ (ಅನುಮೋದಿತ ಸ್ಟ್ಯಾಂಡರ್ಡ್ ಪ್ರ್ಯಾಕ್ಟಿಸಸ್ ಅನುಗುಣವಾಗಿ) ನಿರ್ವಹಿಸತಕ್ಕದ್ದು.
8. ಈ ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಯಾವುದೇ ಕಾನೂನಿನ ಅಡತಡೆಗಳು ಬಂದರೇ ಅದಕ್ಕೆ ಬೆವಿಕಂ ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗಿರುವುದಿಲ್ಲ.
9. ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ ಯಾವುದೇ ರೀತಿಯ ವಿದ್ಯುತ್ ಅಪಘಾತ/ಹಾನಿ/ಆಸ್ತಿ–ಪಾಸ್ತಿ ನಷ್ಟಗಳಿಗೆ ತಾವೇ ನೇರ ಜವಾಬ್ದಾರಾಗಿದ್ದು, ಕಂಪನಿಯು ಯಾವುದೇ ರೀತಿಯಲ್ಲೂ ಅದಕ್ಕೆ ಜವಾಬ್ದಾರಿಯಾಗಿರುವುದಿಲ್ಲ.
10. ಕಾಮಗಾರಿ ಪೂರ್ಣಗೊಂಡ ನಂತರ ಸಂಬಂಧಪಟ್ಟ ಬೆ.ವಿ.ಕಂ ಅಧಿಕಾರಿಗಳೊಡನೆ ಬಳಸಿದ ಸಾಮಾಗ್ರಿಗಳ ಜಂಟಿ ತಪಸೀಲು ಮಾಡುವುದು. ಪರಿಶೀಲನೆ ಸಂದರ್ಭದಲ್ಲಿ ಕಾಮಗಾರಿಯಲ್ಲಿ/ ಬಳಸಲಾದ ಸಾಮಾಗ್ರಿಗಳಲ್ಲಿ ಕಂಡುಬರುವ ಎಲ್ಲಾ ರೀತಿಯ ಲೋಪದೋಷಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಸರಿಪಡಿಸುವುದು.
11. ಕಾಮಗಾರಿಯಲ್ಲಿ ಬಳಸಿದ ಸಾಮಾಗ್ರಿಗಳಿಗೆ ಹಾಗೂ ಕಾಮಗಾರಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ತಮ್ಮ ವತಿಯಿಂದ ಒಂದು ವರ್ಷದ ಅವಧಿಯ ಖಾತರಿಯನ್ನು ನೀಡಬೇಕು.
12. ಕಾಮಗಾರಿಯು ಪೂರ್ಣಗೊಂಡ ನಂತರ ಎಲ್ಲಾ ಸೇವಾ ಮಾರ್ಗಗಳು ಹಾಗೂ ಸಂಬಂಧಿತ ಎಲ್ಲಾ ಪೂರಕ ಸಾಮಾಗ್ರಿಗಳನ್ನು ಬೆ.ವಿ.ಕಂ.ಯ ವಶಕ್ಕೆ ನೀಡಬೇಕು ಹಾಗೂ ಅಲ್ಲಿಂದ ಮುಂದೆ ಅದರ ಮಾಲೀಕತ್ವವು ಬೆ.ವಿ.ಕಂ ಯದ್ದಾಗಿರುತ್ತದೆ.
13. ಅನುಮೋದಿತ ಕಾಮಗಾರಿಯನ್ನು ಕಾರ್ಯಾದೇಶ ನೀಡಿದ ದಿನದಿಂದ ಮೂರು ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವುದು, ಇಲ್ಲದಿದ್ದಲ್ಲಿ ಸದರಿ ಕಾರ್ಯಾದೇಶವು ಅನೂರ್ಜಿತವಾಗುತ್ತದೆ.
14. ನಿರ್ಮಿಸಿರುವ ವಿದ್ಯುತ್ ಮಾರ್ಗ/ಜಾಲಕ್ಕೆ ಸರ್ಕಾರಿ ವಿದ್ಯುತ್ ಪರಿವೀಕ್ಷಣಾಲಯ ದಿಂದ ಅನುಮತಿಯನ್ನು ಪಡೆದು ಸಲ್ಲಿಸುವುದು.
15. ಉಳಿದಂತೆ, ವಿದ್ಯುತ್ ಮಂಜೂರಾತಿ/ ವಿದ್ಯುತ್ ಜಾಲ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ತನ್ನ ನಿಯಮಾವಳಿಯಲ್ಲಿ ಕಾಲಾನುಕಾಲಕ್ಕೆ ಹೊರಡಿಸುವ/ ಚಾಲ್ತಿಯಲ್ಲಿರುವ ನಿಯಮಗಳಿಗೆ ಬದ್ಧರಾಗಿರುವುದು.ಈ ಪತ್ರದಲ್ಲಿ ನಮೂದಿಸಿರುವ ಠೇವಣಿಗಳನ್ನು ಪಾವತಿಸಿದ ನಂತರ, ವೈರಿಂಗ್ ನಕ್ಷೆ, ಗುತ್ತಿಗೆದಾರರ ಸಮಾಪನಾ ವರದಿ ಮತ್ತು ಒಪ್ಪಂದ ಪ್ರತಿಗಳನ್ನು ಸಂಬಂಧಪಟ್ಟ ಉಪ–ವಿಭಾಗದಲ್ಲಿ ಸಲ್ಲಿಸುವುದು.
16. ವಿದ್ಯುತ್ ಸಂಪರ್ಕಕ್ಕಾಗಿ ನೀವು ಸಲ್ಲಿಸಿರುವ ಬಿ.ಬಿ.ಎಂ.ಪಿ./ಬಿ.ಎಂ.ಆರ್.ಡಿ.ಎ./ನಗರ ಪಾಲಿಕೆ/ಗ್ರಾಮ ಪಂಚಾಯಿತಿಯಿಂದ ಅನುಮೋದನೆಗೊಂಡ ನಕ್ಷೆ / ಮಾಲೀಕತ್ವದ ದಾಖಲೆಗಳು / ಜನರಲ್ ಲೈಸೆನ್ಸ್ ಹಾಗು ಇತರೆ ದಾಖಲಾತಿಗಳು ನಕಲಿ/ಸುಳ್ಳು ಎಂದು ಕಂಡು ಬಂದಲ್ಲಿ, ಹಾಗೂ ತಾವು ವಿದ್ಯುತ್ ಸಂಪರ್ಕವನ್ನು ಕೋರಿರುವ ನಿವೇಶನ / ಜಾಮೀನಿನ ಮೇಲೆ ಯಾವುದೇ ವ್ಯಾಜ್ಯಗಳು / ಘನ ನ್ಯಾಯಾಲಯದಲ್ಲಿ ಇರುವುದು ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ನಿಮ್ಮ ಕಟ್ಟಡಕ್ಕೆ ಏರ್ಪಡಿಸುವ ವಿದ್ಯುತ್ ಸಂಪರ್ಕವನ್ನು ಕಡಿತ ಗೊಳಿಸಲಾಗುವುದು ಮತ್ತು ನೀವು ಬೆ.ವಿ.ಕಂ.ಗೆ ಪಾವತಿಸಿರುವ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
17. ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿ ನಿರ್ವಹಿಸುವ ಕಾಮಗಾರಿಗಳಲ್ಲಿ ಭೂಗತ ಕೇಬಲ್ ಅನ್ನು ಅಳವಡಿಸುವ ಕಾಮಗಾರಿ ಸೇರಿಕೊಂಡಿದ್ದಲ್ಲಿ, ಅಂತಹ ಕಾಮಗಾರಿಗಳ ನಿರ್ವಹಣೆಯನ್ನು ಕೇಬಲ್ (ವರ್ಕ್ಸ್ ಮತ್ತು ನಿರ್ವಹಣೆ) ವಿಭಾಗದವರು ಮೇಲ್ವಿಚಾರಣೆ ಮಾಡಬೇಕಾಗಿದ್ದು, ಕಾಮಗಾರಿಯನ್ನು ಮುಗಿದ ನಂತರ ಕೇಬಲ್ (ವರ್ಕ್ಸ್ ಮತ್ತು ನಿರ್ವಹಣೆ) ವಿಭಾಗದ ಸಿಬ್ಬಂಧಿ ಮತ್ತು ಟಿ.ಎ & ಕ್ಯೂಸಿ ರವರು ಜಂಟಿಯಾಗಿ ದೃಢೀಕರಿಸುವುದು.
18. ತಮಗೆ ವಿದ್ಯುತ್ ಸರಬರಾಜು ಮಾಡಲು ಸೂಕ್ತ ಮಾಪಕವನ್ನು ನಿಯಮಾನುಸಾರ ನಿಮ್ಮ ವೆಚ್ಚದಲ್ಲಿ ಮಾಪಕದ ಸಾಮಾಗ್ರಿಗಳನ್ನು ಖರೀದಿಸುವುದು.



Scanned with CamScanner

19. ಈ ಮಂಜೂರಾತಿ ಆದೇಶವವು ಅರ್ಜಿದಾರರು / ವಿದ್ಯುತ್ ಗ್ರಾಹಕರು ಕೆ.ಇ.ಆರ್.ಸಿ / ಬೆ.ವಿ.ಕಂ ನಿಂದ ಈಗಾಗಲೇ ಹೊರಡಿಸಿರುವ / ಮುಂದಿನ ದಿನಗಳಲ್ಲಿ ಹೊರಡಿಸುವ ಆದೇಶಗಳಿಗೆ ಬದ್ಧರಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.
20. ಘನ ಸರ್ವೋಚ್ಚ ನ್ಯಾಯಾಲಯ ಸಿವಿಲ್ ಅಪೀಲು ಸಂಖ್ಯೆ 14604/2024 ಮತ್ತು 14605/2024 ದಿನಾಂಕ : 17-12-2024 ರಲ್ಲಿ ನೀಡಿರುವ ಆದೇಶವನ್ನು ಪಾಲಿಸಲು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದವರ ಪತ್ರ ಸಂಖ್ಯೆ : KERC/12/DDD/1255/2024-25/1689/ 13-03-2025 ಹೊರಡಿಸಿರುವ ಆದೇಶಗಳ ನಿಬಂಧನೆಗೆ ಈ ವಿದ್ಯುತ್ ಮಂಜೂರಾತಿ ಒಳಪಟ್ಟಿರುತ್ತದೆ.
21. ಹಾಲಿ ಇರುವ ಕಟ್ಟಡದ ವಿಸ್ತೀರ್ಣದಲ್ಲಿ ಯಾವುದೇ ಮಾರ್ಪಾಟು ಮಾಡಿರುವುದು ಕಂಡುಬಂದಲ್ಲಿ, ಈ ಮಂಜೂರಾತಿ ನಿಬಂಧನೆ-19 & 20 ರಲ್ಲಿನ ನಿಯಾಮಾವಳಿಗಳನ್ವಯ ಈ ವಿದ್ಯುತ್ ಮಂಜೂರಾತಿಯನ್ನು ಹಿಂಪಡೆಯಲಾಗುವುದು.
22. ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿ ನಿರ್ವಹಿಸುವ ಕಾಮಗಾರಿಗಳಲ್ಲಿ ಭೂಗತ ಕೇಬಲ್ ಅನ್ನು ಅಳವಡಿಸುವ ಕಾಮಗಾರಿ ಸೇರಿಕೊಂಡಿದ್ದಲ್ಲಿ, ಅಂತಹ ಕಾಮಗಾರಿಗಳ ನಿರ್ವಹಣೆಯನ್ನು ಕೇಬಲ್ (ವರ್ಕ್ಸ್ ಮತ್ತು ನಿರ್ವಹಣೆ) ವಿಭಾಗದವರು ಮೇಲ್ವಿಚಾರಣೆ ಮಾಡಬೇಕಾಗಿದ್ದು, ಕಾಮಗಾರಿಯನ್ನು ಮುಗಿದ ನಂತರ ಕೇಬಲ್ (ವರ್ಕ್ಸ್ ಮತ್ತು ನಿರ್ವಹಣೆ) ವಿಭಾಗದ ಸಿಬ್ಬಂಧಿ ಮತ್ತು ಟಿ.ಎ & ಕ್ಯೂಸಿ ರವರು ಜಂಟಿಯಾಗಿ ದೃಢೀಕರಿಸುವುದು.

ಈ ಕಾಮಗಾರಿಯನ್ನು ಸ್ವಯಂ ಕಾಮಗಾರಿ ಯೋಜನೆಯಡಿಯಲ್ಲಿ ದರ್ಜೆ-1 ವಿದ್ಯುತ್ ಗುತ್ತಿಗೆದಾರರ ಮುಖಾಂತರ ನಿರ್ವಹಿಸತಕ್ಕದ್ದು ಹಾಗೂ ಕಾಮಗಾರಿ ನಿರ್ವಹಿಸುವ ಮುಂಚೆ ಸಂಬಂಧಪಟ್ಟ ಬೆವಿಕಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಜಿಗಣಿ ಉಪವಿಭಾಗ , ಸಹಾಯಕ ಇಂಜಿನಿಯರ್ (ವಿ) / ಕಿರಿಯ ಇಂಜಿನಿಯರ್ (ವಿ) ರವರನ್ನು ಸಂಪರ್ಕಿಸಿ ಅವರ ಮಾರ್ಗದರ್ಶನದಲ್ಲಿ ಅವಶ್ಯವಾದ ಎಲ್ಲಾ ರೀತಿಯ ಸುರಕ್ಷತಾ ವಿಧಾನ ಮತ್ತು ಸಲಕರಣೆಗಳನ್ನು ಉಪಯೋಗಿಸಿ, ಬೆವಿಕಂ / ಇತರೆ ಕೇಬಲ್ / ವಿದ್ಯುತ್ ಮಾರ್ಗಗಳನ್ನು ಹಾಳು ಮಾಡದೇ (ಡ್ಯಾಮೇಜ್ ಮಾಡದೇ) ಕಾರ್ಯನಿರ್ವಹಿಸುವ ನಿಬಂಧನೆಗಳಿಗೆ ಒಳಪಟ್ಟು, ತಮಗೆ ವಿದ್ಯುತ್ ಮಂಜೂರಾತಿಯನ್ನು ನೀಡಿದೆ.

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ವಾ, ಕಾರ್ಯ ಮತ್ತು ಪಾಲನೆ ವಿಭಾಗ, ಬೆ.ವಿ.ಕಂ,
ಚಂದಾಪುರ.



Scanned with CamScanner